ಆಹ್ವಾನಿಸುತ್ತಾರೆ. ಪೂಜೆ ಮುಗಿಯುವವರೆಗೂ ಬಾಳೇ ಹಣ್ಣೇ ಗಣಪತಿ, ತೆಂಗಿನಕಾಯೇ ಸತ್ಯನಾರಾಯಣ. ಆಮೇಲೆ ಕದಲಿಸುವ ಶಾಸ್ತ್ರ ಮಾಡುತ್ತಾರೆ. ಅಲ್ಲಿಯವರೆಗೆ ಜೀವ ಧರಿಸಿದ್ದ ವಸ್ತುವೇ ಮತ್ತೆ ಜೀವವನ್ನು ಬಿಟ್ಟು ಕೊಟ್ಟು ಮೊದಲಿನ ವಸ್ತುವಾಗುತ್ತದೆ. ಬೇಕು ಅಂದರೆ ದೇವರು. ಬೇಡ ಅಂದರೆ ಕಲ್ಲು! ಸಂಸ್ಕೃತದಲ್ಲಿ ಮಂತ್ರ ಹೇಳುತ್ತಾರಾದ್ದರಿಂದ ಇದೆಲ್ಲ ಸಹಜವೇನೋ ಎಂಬಂತೆ ನಡೆದುಬಿಡುತ್ತದೆ. ಆದರೆ ಕನ್ನಡದಲ್ಲಾಗಿದ್ದರೆ ಅಲ್ಲೇ ಸುತ್ತ ಮುತ್ತ ಕೂತಿರುತ್ತಿದ್ದ. ಮಕ್ಕಳು 'ಅಯ್ಯೋ ಬಾಳೆಹಣ್ಣು ಗಣಪತಿಯಂತೆ, ತೆಂಗಿನಕಾಯಿ ದೇವರಂತೆ, ಅಪ್ಪಾ ನೀನೀಗ ದೇವರನ್ನೇ ಒಡೆದು ಹಾಕುತ್ತೀಯ...' ಅಂತ ಕೇಳಿರುತ್ತಿದ್ದವು. ಹಾಗಾಗಿ ಸದ್ಯಕ್ಕೆ ದೇವರ ಪೂಜೆ ಸಂಸ್ಕೃತದಲ್ಲೇ ನಡೆಯುವುದು ಸೂಕ್ತ ಅಲ್ಲವೇ? ಇನ್ನೊಮ್ಮೆ ಒಂದು ಸೂತಕದ ಸಂದರ್ಭದಲ್ಲಿ ಮಣ್ಣಿನ ನೆಲದ ಮೇಲೇ ನನ್ನನ್ನು ಕೂಡಿಸಿದ ಪುರೋಹಿತರು ಅಲ್ಲೇ ಸುತ್ತಮುತ್ತ ಬಿದ್ದಿದ್ದ ಕಲ್ಲುಗಳನ್ನು ಒಟ್ಟುಗೂಡಿಸಿ ನನ್ನಿಂದ ಮೂರು ಭಾಗ ಮಾಡಿಸಿದರು. ಅದರಲ್ಲಿ ಶಕ್ತಿದೇವತೆ, ದುಷ್ಟಶಕ್ತಿಗಳನ್ನು ಕರೆದು ಕೂಡಿಸಿದರು. ನನ್ನಿಂದ ಪೂಜೆ ಮಾಡಿಸಿ ಆಮೇಲೆ ಅವುಗಳನ್ನೆಲ್ಲಾ ಎಲ್ಲೆಲ್ಲಿಗೋ ಕಳಿಸಿದರು. ಎಂತೆಂಥ ಪವರ್ ಫುಲ್ ದೇವರುಗಳೂ ಇವರು ಕರೆದೊಡನೆ ಬರುತ್ತಾರೆ; ಓಡಿಸಿದೊಡನೆ ಓಡುತ್ತಾರೆ... ನಮ್ಮನ್ನು ಯಾರಾದರೂ ಮನೆಗೆ ಕರೆದು ಮರದ ಬೆಂಚಿನ ಮೇಲೆ ಕೂರಿಸಿದರೆ, ನೆಲದ ಮೇಲೆ ಕೂರಿಸಿದರೆ ಸುಮ್ಮನಿರ್ತೀವಾ? ಆದರೆ ಪಾಪ ದೇವರುಗಳು ಹೇಳಿದಂತೆ ಕೇಳಿಕೊಂಡು ಇರುತ್ತವೆ. ಅಂದಮೇಲೆ ದೇವರಿಂದ ಕಲಿಯಬೇಕಾದ್ದು ಬಹಳ ಇದೆ. ಒಂದು ಸಲ ನನಗೊಂದು ಅನುಮಾನ ಬಂತು. ಅದನ್ನೇ ಕವಿತೆಯಾಗಿಸಿಬಿಟ್ಟೆ.

ನದಿ ಕಡಲು ಮರ ಪ್ರಾಣಿ ಗುಡ್ಡ ನೆಲ
ಎಲ್ಲವೂ ಮನುಷ್ಯರಂತೆ ಎಂದು ಆಕಾರ ಕೊಟ್ಟು
ಪೂಜೆಗೈದು ಪುರಾಣ ನೈವೇದ್ಯದಂತೆ ಬದುಕುವಲ್ಲಿ
ನಾವೂ ನದಿ ಗಿಡ ಪಕ್ಷಿಯಾಗಿರಬಹುದು ಅವುಗಳ ಲೋಕದಲ್ಲಿ...

ಹೌದೇ? ಅವು ಆವಾಹಿಸಿದಾಗ ನಾವೂ ಹೋಗಿ ಬಂದಿರಬಹುದೇ ? ಈ ಸಲ ಆವಾಹಿಸಿದಾಗ ಅವರನ್ನು ಕೇಳಿ ನನಗೆ ಹೇಳಿ ಎಂದು ಪುರೋಹಿತರಿಗೆ ಹೇಳಬೇಕು. ಇದಾವುದೂ ಗೊತ್ತಿಲ್ಲದ ವಯಸ್ಸಲ್ಲಿ ನನ್ನ ಮಗ ಇದರ ಪ್ರಾತ್ಯಕ್ಷಿಕೆ ಮಾಡಿ ತೋರಿಸಿಬಿಟ್ಟ, ಅವನಿಗಾಗ ನಾಲ್ಕು ವರ್ಷ. ನಾನು ನನ್ನ ಪತ್ನಿ ಅವನನ್ನು ಅಂಕೋಲೆಯ ಸಾಹಿತ್ಯ ಸಮಾವೇಶಕ್ಕೆ ಕರೆದುಕೊಂಡು ಹೋಗಿದ್ದೆವು. ನಮಗಿಬ್ಬರಿಗೂ ಭಾಷಣ ಕೇಳುವ ಹುಮ್ಮಸ್ಸಿತ್ತು. ಹಿಂದೆ ಪುಸ್ತಕದಂಗಡಿಯ ಸಾಲಿನಲ್ಲಿ ಗೊತ್ತಿದ್ದ ಕೆಲ ಹುಡುಗರು ಅವನನ್ನು ಆಟವಾಡಿಸಿಕೊಂಡು ಇರುತ್ತೇವೆಂದು ಹೇಳಿದ್ದರಿಂದ ನಾವು ಸಮಾರಂಭದಲ್ಲಿ ಕೂತೆವು. ಸ್ವಲ್ಪ ಹೊತ್ತಿನಲ್ಲೇ ಹುಡುಗರು ಓಡಿಬಂದು 'ನಿಮ್ಮ ಮಗ ಅಳ್ತಾ ಇದ್ದಾನೆ ಬನ್ನಿ' ಎಂದರು. ನಾವು ಧಾವಿಸಿದೆವು. ಅಲ್ಲಿ ನನ್ನ ಮಗನ ಆರ್ಭಟ. ಅಳು ಮತ್ತು ಮಾತು ಎರಡೂ ಒಟ್ಟಿಗೇ ಸೇರಿ ಏನು ಹೇಳಲು ಯತ್ನಿಸುತ್ತಿದ್ದಾನೆ ತಿಳಿಯಲಿಲ್ಲ. 'ಅದು ಸತ್ತು ಹೋಯ್ತು, ಅದು ಸತ್ತು ಹೋಯ್ತು' ಅಂತ ಯಾವುದಕ್ಕೆ ಹೇಳ್ತಿದ್ದಾನೆ ಎಂಬುದು ಕೊನೆಗೂ ಅವನ ಮಾತೃ ಹೃದಯಕ್ಕೆ ತಿಳಿಯಿತು. ಅದೊಂದು ನೆಟ್ ವರ್ಕ್. ಅದರ ವ್ಯಾಪ್ತಿ ಪ್ರದೇಶದಿಂದ ಅಪ್ಪಂದಿರು ಯಾವಾಗಲೂ ಹೊರಗೆ. ಆದುದು ಇಷ್ಟೇ. ಅವನು ಆಟವಾಡುತ್ತಿದ್ದ ಪೇಪರನ್ನು ಕೀಟಲೆಗಾಗಿ ಯಾರೋ ಹರಿದಿದ್ದರು. ಅಂದಮೇಲೆ ಅವನ ಪ್ರಕಾರ ಅದರ ಜೀವ ಹೋಯಿತು. ಸತ್ತು ಹೋಯ್ತು. ಕಾರಣವಿಷ್ಟೆ. ಮನೆಯಲ್ಲಿರುವ ಪುಸ್ತಕಗಳನ್ನು ಹರಿಯಬಾರದು ಎಂಬ ಕಾರಣಕ್ಕೆ 'ಎಲ್ಲದಕ್ಕೂ ಜೀವ ಇರುತ್ತೆ, ಮನಸ್ಸಿರುತ್ತೆ' ಅಂತ ಅವನಮ್ಮನಿಂದ ಅವನಿಗೆ ಬೋಧೆಯಾಗಿತ್ತು. ಈಗ ಆ ಬೋಧೆಯೇ ತಿರುಗುಬಾಣವಾಗಿತ್ತು. ಸರಿ, ಕೊನೆಗೆ ಮಾಯಾ ಮಂತ್ರದ ಆಟವಾಡಿ